ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **01.06.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲು**:** ಪ್ರತಿವಾದಿ ಪರಃ ಶ್ರೀ**.** ಆರ್**.**ಎಂ**.**ಹೆಚ್**.** ವಕೀಲರ ಮೂಲಕ ಃ

ನಾನು ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಯು ನನಗೆ ನನ್ನ ತಂದೆಯ ಕಡೆಯಿಂದ ಅಜ್ಜಿಯಾಗಬೇಕು. ನನಗೆ ಬುದ್ದಿಬಂದಾಗಿನಿಂದ ನಾನು ಪ್ರತಿವಾದಿಯನ್ನು ನೋಡುತ್ತಿದ್ದೇನೆ. ಪ್ರತಿವಾದಿಯ ಗಂಡನ ಹೆಸರು ಕಾಳಲಿಂಗಪ್ಪ. ಸದರಿಯವರು ಮೃತರಾಗಿದ್ದು, ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿಯವರು ಮೃತರಾದ ನಂತರ ಮನೆಯ ವ್ಯವಹಾರವನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಕಾಳಲಿಂಗಪ್ಪರವರಿಗೆ ಮಕ್ಕಳಿಲ್ಲದ ಕಾರಣ ಮೃತರಾದ ನಂತರ ಅವರ ಕುಟುಂಬದಲ್ಲಿ ಆರ್ಥಿಕ ತೊಂದರೆ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿಯು ದಾವಾ ಸ್ವತ್ತನ್ನು ಕ್ರಯಕ್ಕೆ ಕೊಡುವುದಾಗಿ ನಾನು ಮನೆಯಲ್ಲಿ ಇದ್ದ ಸಂದರ್ಭದಲ್ಲಿ ನನ್ನ ತಂದೆಯ ಜೊತೆ ಮಾತನಾಡಿರುತ್ತಾರೆ. ಸದರಿ ಕಾಲಕ್ಕೆ ನಮ್ಮ ಮನೆ ಸೊಸೈಟಿಯ ಬಳಿ ಇತ್ತು, ಪ್ರತಿವಾದಿಯ ಮನೆ ಸ್ವಲ್ಪ ದೂರದಲ್ಲಿ ಇತ್ತು. ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಭಾನುವಾರವನ್ನು ಹೊರತುಪಡಿಸಿ ಬೇರೆ ದಿನ ಗಾರ್ಮೆಂಟ್ಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತೇನೆ. ನಾನು ಗಾರ್ಮೆಂಟ್ಸ್ ಕೆಲಸವನ್ನು ಮುಗಿಸಿ ನನ್ನ ಗಂಡನ ಮನೆ ಬುಜಿವಳ್ಳಿ ಗ್ರಾಮಕ್ಕೆ ಹೋಗುತ್ತಿದ್ದೆ. ನಾನು ಪ್ರಸ್ತುತವಾಗಿ ಬೆಂಗಳೂರಿನಲ್ಲಿ ವಾಸವಿರುತ್ತೇನೆ. ನಾನು ಕೆಲಸ ಮಾಡುವ ಗಾರ್ಮೆಂಟ್ಸ್ ನಾಯಂಡಹಳ್ಳಿಯಲ್ಲಿ ಇರುತ್ತದೆ. ಕರಾರು ಆಗುವ ಒಂದು ತಿಂಗಳ ಪೂರ್ವದಲ್ಲಿ ಪ್ರತಿವಾದಿಯು ನಮ್ಮ ಮನೆಗೆ ಕ್ರಯದ ಬಗ್ಗೆ ಮಾತನಾಡಲು ಬಂದಿದ್ದರು. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಪ್ರತಿವಾದಿ ಮತ್ತು ಇತರರು ನಮ್ಮ ಮನೆಗೆ ಕ್ರಯದ ಬಗ್ಗೆ ಮಾತನಾಡಲು ಬಂದಿದ್ದರು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ.

3. ದಾವಾ ಸ್ವತ್ತಿಗೆ ಒಟ್ಟಾಗಿ ಮೊತ್ತವನ್ನು ನಿಗದಿ ಪಡಿಸಲಾಗಿರುತ್ತದೆ. ದಾವಾ ಸ್ವತ್ತು 2022 ರಲ್ಲಿ ಒಂದು ಗುಂಟೆಗೆ 50 ಸಾವಿರ ರೂಪಾಯಿಗೂ ಹೆಚ್ಚು ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಕ್ರಯದ ಮಾತುಕತೆ ಪ್ರತಿವಾದಿಯ ಮನೆಯಲ್ಲಿಯೇ ಆಗಿರುತ್ತದೆ. ಕರಾರು ಆಗುವ ಪೂರ್ವದಲ್ಲಿ ನಾನು ಪ್ರತಿವಾದಿಗೆ ಸ್ವಲ್ಪ ಮೊತ್ತವನ್ನು ಪಾವತಿ ಮಾಡಿದ್ದು, ಕರಾರು ದಿನಕ್ಕೆ ಪೂರ್ತಿ ಮೊತ್ತವನ್ನು ಪಾವತಿ ಮಾಡಿರುತ್ತೇನೆ. ಕರಾರಿನ ಪೂರ್ವದಲ್ಲಿ 2 ಲಕ್ಷ ರೂಪಾಯಿಯನ್ನು ಪಾವತಿ ಮಾಡಿ, ಕರಾರು ದಿನದಂದು 3

ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿರುತ್ತೇನೆ. ಆ ರೀತಿ ಪೂರ್ವದಲ್ಲಿ 2 ಲಕ್ಷ ರೂಪಾಯಿ ಪಾವತಿ ಮಾಡಿದ್ದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು, ಪ್ರತಿವಾದಿ, ಸಾಕ್ಷಿಗಳು ತಯಾರು ಮಾಡಿಸಿರುತ್ತೇವೆ. ನನಗೆ ಪ್ರಮಾಣ ಪತ್ರದ ವಿಚಾರಗಳು ಗೊತ್ತಿಲ್ಲದೇ ಕೇವಲ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ಪ್ರತಿವಾದಿಗೆ ದಾವಾ ಸ್ವತ್ತನ್ನು  ಹೊರತುಪಡಿಸಿ, ಬೇರೆ ಸ್ವತ್ತು ಇಲ್ಲ ಎಂಬ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. ನನಗೆ ದಾವಾ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಮನೆಯ ನಂತರ ಕಾಲುವೆಯ ಪಕ್ಕದಲ್ಲಿ ಇರುತ್ತದೆ. ನಾನು ದಾವಾ ಸ್ವತ್ತನ್ನು  ನೋಡಿರುತ್ತೇನೆ. ದಾವಾ ಸ್ವತ್ತಿಗೆ ಚೆಕ್‌ಬಂದಿ ಪೂರ್ವಕ್ಕೆ ಕಾಲುವೆ ಇದೆ,  ಪಶ್ಚಿಮಕ್ಕೆ ಶಿವಮೂರ್ತಿ ಮತ್ತು ಶಿವಸ್ವಾಮಿ ಜಮೀನು, ಉತ್ತರಕ್ಕೆ ಮಹದೇವಸ್ವಾಮಿರವರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮ ತಂದೆಯ ಜಮೀನು ಇರುತ್ತದೆ. ದಾವಾ ಸ್ವತ್ತಿನ ಬೆಲೆಯ ಬಗ್ಗೆ ಅಕ್ಕಪಕ್ಕದ ಜಮೀನಿನವರನ್ನು ವಿಚಾರಿಸಿರುತ್ತೀರಾ ಎಂದರೆ ಗ್ರಾಮಸ್ಥರು ಸೇರಿ ಕ್ರಯದ ಮಾತುಕತೆ ಮಾಡಿರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತನ್ನು ಯಾವ ಉದ್ದೇಶಕ್ಕೆ ಮಾರಾಟ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಪತಿ ಮೃತಪಟ್ಟ ನಂತರ ಅವರಿಗೆ ಜೀವನ ನಿರ್ವಹಣೆಗೆ ತೊಂದರೆಯಾಗಿದ್ದ ಕಾರಣ ಪ್ರತಿವಾದಿಯು ನನ್ನ ತಂದೆಯನ್ನು ಭೇಟಿ ಮಾಡಿ ಸಾಲವನ್ನು ಕೇಳಿದ್ದು, ಅವರು ತನ್ನ ಮಗಳ ಬಳಿ ಅಂದರೆ ನನ್ನ ಬಳಿ ಪಡೆದು ಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಕರಾರನ್ನು ಮಾಡಿಕೊಟ್ಟರೆ ಮಾತ್ರ ಸಾಲ ಕೊಡುವುದಾಗಿ ನಾನು ಹೇಳಿ, ಪ್ರತಿವಾದಿಯಿಂದ ಬಲವಂತವಾಗಿ ಕರಾರನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಹೆಚ್ಚು ಬೆಲೆ ಇದ್ದರೂ ಸಹ ಪ್ರತಿವಾದಿಗೆ ಮೋಸ ಮಾಡಲು ಕಡಿಮೆ ಮೊತ್ತವನ್ನು ಕರಾರಿನಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತನ್ನು  ಹೊರತುಪಡಿಸಿ, ಬೇರೆ ಸ್ವತ್ತು ಇಲ್ಲದೇ ಇದ್ದರೂ ಸಹ ಅದನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಾಸಾ 2 ರಿಂದ 4 ರವರು ನನ್ನ ತಂದೆಯ ಸ್ನೇಹಿತರು ಎಂದರೆ ಅವರು ಗ್ರಾಮಸ್ಥರು ಆಗಿರುತ್ತಾರೆ. ಸದರಿಯವರು ನನ್ನ ತಂದೆಯ ಸಂಬಂಧಿಕರು ಎಂದರೆ ಸರಿಯಲ್ಲ. ಕ್ರಯದ ಕರಾರು ಆದ ನಂತರ ಪ್ರತಿವಾದಿಯು ಸಾಲದ ಮೊತ್ತವನ್ನು ಹಿಂತಿರುಗಿಸುವುದಾಗಿ ಕೇಳಿಕೊಂಡರೂ ಸಹ ನಾನು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಹಲವು ಬಾರಿ ಗ್ರಾಮದಲ್ಲಿ ಪಂಚಾಯಿತಿ ನಡೆದಿದ್ದು, ನಾನು ಅವರ ಮಾತು ಕೇಳದೇ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಪ್ರತಿವಾದಿಯು ಸಾಲದ ಮೊತ್ತವನ್ನು ಹಿಂತಿರುಗಿಸಲು ತಯಾರು ಇದ್ದರೂ ಸಹ ಕಡಿಮೆ ಮೊತ್ತಕ್ಕೆ ದಾವಾ ಸ್ವತ್ತನ್ನು  ಲಪಟಾಯಿಸಲು ನಾನು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.